ಅಧ್ಯಕ್ಷರು.—ಪ್ರಾಜೆಕ್ಟ್‌ನ ನೋಡಲಿಲ್ಲವೇ? ಸ್ಕೀಮ್ ಓದಲಿಲ್ಲವೇ, ನಮ್ಮನೆ ಏನಾದರೂ ಕೇಳಿ ಬಿಡುತ್ತೀರಿ, ಇಂಟರ್‌ಪೆಲೇಷನ್ ಹಾಕುವಾಗ ಅವುಗಳನ್ನೆಲ್ಲಾ ನೋಡಬೇಕು.

ಶ್ರೀ ಎ. ಜೆ. ದೊಡ್ಡಮೇಟಿ.—ಸಮಗ್ರ ಯೋಜನೆಗೆ ಎಲ್ಲಾ ಹಂತಗಳಲ್ಲಿಯೂ ಇಂಡಿಯಾ ಸರ್ಕಾರದಿಂದ ಟೆಕ್ನಿಕಲ್ ಸ್ಯಾಂಕ್ಷನ್ ದೊರೆತಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ನಾವು ಅದನ್ನು ಕಳುಹಿಸಿರುವುದು ಟೆಕ್ನಿಕಲ್ ಕ್ಲಿಯರೆನ್ಸಿಗಾಗಿ. ಅದು ಆದರೆ ಎಲ್ಲಾ ಹಂತಗಳಲ್ಲಿಯೂ ದೊರೆತಂತೆಯೇ ಎಂದು ನನ್ನ ಭಾವನೆ.

Supply of Power from the Tungabhadra Hydro-Electric Works to Hyderabad Karnatak Area.

*Q.—118. Sri GANGADHAR NAMOSHI (Gulbarga).—

Will the the Government be pleased to state:—

(*a*) the date from which Electric Power will be made available to the Hyderabad Karnatak area from the Hydro-Electric Schemes of Tungabhadra;

(*b*) the quantity of power that will be so available from the said source and the demand for power from different consumers in the Hyderabad Karnatak area;

(*c*) the total outlay to be incurred for the project (details my be furnished);

(*d*) whether they will make any alternative arrangements till such time as the Tungabhadra Hydro-Electric Projects are completed to meet the growing shortage in the Gulbarga and Hyderabad Karnatak Division?

*A.—Sri S. NIJALINGAPPA (Chief Minister).—

(*a*) By the middle of 1963.

(*b*) 18,000 KWs.

Demand for power at present:

Day Power	...	13,230 KWs.
Night Power	...	12,265 KWs.
Industrial additional load registered	...	10,575 KWs.

(*c*) Rs. 312,17,811,00. (Detailed list appended).

(*d*) Yes.

Detailed list showing the total outlay for the Tungabhadra Hydro-Electric Project (Left Bank), Munirabad.

[Incurred up to February 1962.]

Sl. No.	Item		Estimated cost as per revised estimate under sanction by Government	Total expenditure incurred up to the end of Feb. 1962.	Expenditure to be incurred.
1	Civil Works	...	129,55,000	83,17,936	46,37,064
2	Intake Gate and Draft tube equipment.	...	12,84,000	9,06,154	3,77,846
3	Generating Plant and Outdoor Switch Gear Equipment.	...	156,46,000	81,26,637	75,19,363
4	Sub-Stations.	...	65,40,000	28,53,139	36,86,861
5	110 KV., 66 KV. and 33 KV. Transmission Lines.	...	169,94,000	13,69,803	156,24,197
6	11 KV. Distribution Lines.	...	35,00,000	8,54,518	26,45,482
7	Establishment	...	35,01,000	9,63, 08	25,37,192
8	Miscellaneous and Tools and Plant.	...	Provided for in Item No. 3.	4,83,015	—
9	Net Suspense.	...	—	53,27,179	—
		Total ...	604,20,000	292,02,189	312,17,811

ಶ್ರೀ ಗಂಗಾಧರ ನಾಮೋಷಿ.—ನನ್ನ (b) ಪ್ರಶ್ನೆಗೆ ಉತ್ತರವಾಗಿ ಹದಿನೆಂಟು ಸಾವಿರ ಕಿರೋವ್ಯಾಟ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತದೆ ಎಂದು ಹೇಳಿದ್ದೀರಿ, ಅದರಲ್ಲಿ ಎಷ್ಟು ಕಿರೋವಾಟ್ ವಿದ್ಯುಚ್ಛಕ್ತಿ ವೇಸ್ಟಾಗುತ್ತಿದೆ ?

ಶ್ರೀ ಎಸ್ ನಿಜಲಿಂಗಪ್ಪ.—ನುಮಾರು 12 ವರ್ಷಗಳ ಕಾಲ ಎರಡನೇ ಜನರೇಟರ್ ಪ್ರೊಡ್ಯೂಜ್ ಅನ್ನು ಅಲ್ಲಿಂದ ಮುಂದಕ್ಕೆ ಕಳುಹಿಸುವುದಕ್ಕಾಗುವುದಿಲ್ಲ. ಅದನ್ನು ಬೇರೆ ಕಡೆಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡಬೇಕು. ಅಲ್ಲಿ ಈಗ ಬಹುಶಃ ಸಾವಿರಾರು ಕಿರೋವಾಟ್ ವಿದ್ಯುಚ್ಛಕ್ತಿ ಹಾಳಾಗುತ್ತ ಇರಬಹುದು.

Sri G. V. GOWDA.—What are the alternative arrangements that are proposed to be taken up to meet this shortage ?

Sri S. NIJALINGAPPA.—We have ordered for diesel sets for immediate help to these people. We are taking steps to import them.

ಶ್ರೀ ಎ. ಜೆ. ದೊಡ್ಡಮೇಟಿ.—ಡೀಜಿಲ್ ಸೆಟ್ಟುಗಳು ನಮ್ಮ ರಾಜ್ಯಕ್ಕೆ ಎಷ್ಟು ದೊರೆಯುತ್ತವೆ, ಅದರಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಎಷ್ಟು ಕೊಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ನಾವು ನುಮಾರು 50-60 ಸೆಟ್ಟುಗಳಿಗೆ ಆರ್ಡರ್ ಕೊಟ್ಟಿದ್ದೇವೆ. ಆದಷ್ಟು ಮಟ್ಟಿಗೆ ಒಂದೊಂದು ಡಿಸ್ಟ್ರಿಕ್ಟಿಗೆ 2-3 ಕೊಡಬೇಕೆಂದು ಯೋಚನೆ ಇದೆ.

ಶ್ರೀ ಬಿ. ಎಲ್. ಗೌಡ.—ತುಂಗಭದ್ರಾ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯಿಂದ ಚಿತ್ರದುರ್ಗಾ ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಯತ್ನ ಮಾಡೋಣ.

ಶ್ರೀ ಟಿ. ಎಸ್. ಶಿವಣ್ಣ.—ಯಲಬುರ್ಗಿ ಮತ್ತು ಕೊಪ್ಪಳ ತಾಲ್ಲೂಕಿಗೆ ನೀರಾವರಿಗೋಸ್ಕರ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಅಲ್ಲಿಂದ ಬೇಡಿಕೆಗಳೇನಾದರೂ ಬಂದಿವೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಬಂದಿವೆ.

ಶ್ರೀ ಗಂಗಾಧರ ನಾಮೋಷಿ.—ನ್ಯೂ ಎಂಜಿನಿಯರಿಂಗ್ ACC ಫ್ಯಾಕ್ಟರಿಗೆ ೧೬೦ನೇ ಇಸವಿಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಹೇಳಿದ್ದಿರಿ, ಆದರೆ ಅಲ್ಲಿಗೆ ಇನ್ನೂ ವಿದ್ಯುಚ್ಛಕ್ತಿಯನ್ನು ಒದಗಿಸದೆ ಇರುವುದರಿಂದ ಅಲ್ಲಿ ಕೆಲವು ಎಕ್ಸ್‌ಟೆನ್‌ಷನ್ ವರ್ಕ್ಸ್ ನಿಂತಿದೆಯೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್ ನಿಜಲಿಂಗಪ್ಪ.—ಈ ವರ್ಷದ ಕೊನೆಯ ಒಳಗಾಗಿ ಅಲ್ಲಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದಿದ್ದೇವೆ. ಅಲ್ಲಿಗೆ ಸಾಮಾನುಗಳನ್ನು ಕಳುಹಿಸಲು ರೈಲ್ವೆ ಅನುಕೂಲ ಇದೆ. ಈಗ ಟ್ರಕ್ ಕಳುಹಿಸುತ್ತಿದ್ದೇವೆ. ಆದಷ್ಟು ಜಾಗ್ರತೆ ಲೈಟನ್ನು ಕೊಡುತ್ತೇವೆ.

Amount spent on Anchepalya-Yalagalawadi Road in Kunigal Taluk.

*Q.—360. Sri ANDANAIAH (Kunigal).—

Will the Government be pleased to state :

(a) when the Anchepalya-Yalagalawadi road in Huthridurga Hobli-Kunigal Taluk, was taken over by the P.W.D. ;

(b) when the esimate of the same was prepared ;

(c) the amount spent so far by the P.W.D. on the abovesaid road ?

A.—Sri VEERENDRA PATIL (Minister for Public Works).—

(a) During December 1958.

(b) Separate estimates for effecting improvements have been prepared year by year.

(c) Rs. 55,169.

ಶ್ರೀ ಅಂದಾನಯ್ಯ.—ಯಲಗಲವಾಡಿ-ಅಂಚೇ ಪಾಳ್ಯದ ರಸ್ತೆಯ ಉದ್ದವೆಷ್ಟು ?

†ಶ್ರೀ ವೀರೇಂದ್ರಪಾಟೀಲ್.—ಹನ್ನೆರಡು ಮೈಲಿ.

ಶ್ರೀ ಅಂದಾನಯ್ಯ.—ಹನ್ನೆರಡು ಮೈಲಿ ಉದ್ದದ ರಸ್ತೆಯನ್ನು ಮಾಡಬೇಕಾದರೆ ಇಷ್ಟು ವರ್ಷ ತಡವಾಗಲು ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.— ತಡವಾಗಿಲ್ಲ. S.T.C. ರೋಡು ಮತ್ತು ಸ್ಟೇಟ್ ಫಂಡ್ ರೋಡ್ ಪ್ರಾಜೆಕ್ಟೆನೆನ್ಸ್ ಸಲುವಾಗಿ ಪ್ರತಿ ವರ್ಷ ಇಷ್ಟು ಖರ್ಚು ಮಾಡಬೇಕೆಂದಿದೆ. ಅದರ ಪ್ರಕಾರ ಖರ್ಚು ಮಾಡುತ್ತಿದ್ದೇವೆ.

ಶ್ರೀ ಅಂದಾನಯ್ಯ.—ಎಷ್ಟು ವರ್ಷಗಳಲ್ಲಿ ಇದನ್ನು ಪೂರೈಸುತ್ತೀರಿ ?

ಶ್ರೀ ವೀರೇಂದ್ರಪಾಟೀಲ್.—ಈ ವರ್ಷ 7,500 ಮೈಲಿ ರಸ್ತೆಯನ್ನು ತೆಗೆದುಕೊಂಡಿದ್ದೇವೆ. ದುಡ್ಡು ಬಂದ ಹಾಗೆಲ್ಲಾ ಆದಷ್ಟು ಜಾಗ್ರತೆ ಅದನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಎ. ವಾಸಣ್ಣ ಶೆಟ್ಟಿ.—ಪಬ್ಲಿಕ್ ವರ್ಕ್ಸ್ ಇಲಾಖೆಯವರು ತೆಗೆದುಕೊಂಡ ರಸ್ತೆಗಳನ್ನು ರಿಪೇರಿ ಮಾಡಲು ದುಡ್ಡು ಇಲ್ಲ ಎಂದು ಕೆಲಸ ನಿಲ್ಲಿಸಿದರೆ ಅದರಿಂದ ಬಹಳ ಅನಾನುಕೂಲವಾಗುತ್ತದೆ ಅಲ್ಲವೇ !

ಅಧ್ಯಕ್ಷರು.—ಅದಕ್ಕೆ ಏನು ಮಾಡಬೇಕು ಎಂದು ಹೇಳುತ್ತೀರಿ ?

ಶ್ರೀ ಎಸ್. ಎ. ವಾಸಣ್ಣ ಶೆಟ್ಟಿ.—ಪಬ್ಲಿಕ್ ವರ್ಕ್ಸ್ ಇಲಾಖೆಯವರು ತೆಗೆದುಕೊಂಡ ರಸ್ತೆಗಳಿಗೆ ಆದಷ್ಟು ಹಣವನ್ನು ಒದಗಿಸಿ ಆ ಕೆಲಸಗಳನ್ನು ಮಾಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹನ್ನೆರಡು ಮೈಲಿಗಳಂತೆ ತೆಗೆದುಕೊಂಡು 52 ಸಾವಿರ ಮೈಲುಗಳಿಗೆ ಈಗಾಗಲೇ ಹಣವನ್ನು ಖರ್ಚುಮಾಡಿದ್ದೇವೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ರಸ್ತೆಗಳನ್ನು ವಹಿಸಿಕೊಂಡನಂತರ ಅವುಗಳಿಗೆ ಒಂದು ಕಾಸನ್ನೂ ಖರ್ಚುಮಾಡದ ಹಾಗೇ ಇದ್ದರೆ ಆ ರೋಡುಗಳನ್ನು ನೀವು ಏತಕ್ಕೆ ತೆಗೆದುಕೊಂಡಿರಿ ಎಂದು ತಾವು ಕೇಳಬಹುದು.

ಶ್ರೀ ಎಸ್. ಎ. ವಾಸಣ್ಣ ಶೆಟ್ಟಿ.—ಆಡಳಿತದ ನಿರ್ವಹಣೆಗೆ ಹಣ ಇಲ್ಲದೆ ಇದ್ದರೆ ಆಗ ತಾವೇನು ಮಾಡುತ್ತೀರಿ ?

Mr. SPEAKER.—Hon. Minister will kindly see that if it is a reasonable suggestion, he is bound to accept.

Sri VEERENDRA PATIL.—Yes, I am prepared to accept any reasonable suggestion.

ಶ್ರೀ ಬಿ. ಹುಚ್ಚೇಗೌಡ.—ಈಗ ಕೆಲವು ರೋಡುಗಳನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಬೇಕೆಂದಿ